Prajawani 14/3/20

ಗೇರು ಕೃಷಿ ವಿಚಾರಸಂಕಿರಣದಲ್ಲಿ ಜಿಲ್ಲಾಧಿಕಾರಿ ಸಿಂಧೂ ಬಿ. ರೀಪೇಶ್

# ತಂತ್ರಜ್ಞಾನ ಬಳಸಿದರೆ ಆದಾಯ ದ್ವಿಗುಣ

ಪುತ್ತೂರು : ಹೊಸ ತಂತ್ರಜ್ಞಾನ, ಅಧಿಕ ಇಳುವರಿಯ ಸುಧಾರಿತ ತಳಿಗಳನ್ನು ಅಳವಡಿಸಿಕೊಂಡಾಗ ಗೇರು ಕೃಷಿಯಲ್ಲಿ ಸ್ವಾವಲಂಬನಯೊಂದಿಗೆ, ಆದಾಯವನ್ನು ದ್ವಿಗುಣಗೊಳಿಸಲು ಸಾಧ್ಯವಿದೆ ಎಂದು ಜಿಲ್ಲಾಧಿಕಾರಿ ಜಿಲ್ಲಾಧಿಕಾರಿ ಸಿಂಧೂ ಬಿ. ರೂಪೇಶ್ ಹೇಳಿದರು.

ಪುತ್ತೂರಿನ ಮೊಟ್ಟೆತ್ತಡ್ಕದಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಶುಕ್ರವಾರ ನಡೆದ 'ರಾಷ್ಟ್ರೀಯ ಗೇರು ದಿನಾಚರಣೆ'ಯನ್ನು ಉದ್ಘಾಟಿಸಿ, ಪರಿಶಿಷ್ಟ ಜಾತಿ ಅಭಿವೃದ್ಧಿ ಯೋಜನೆಯಡಿ ವಿವಿಧ ಗೇರು ಬೆಳೆಗಾರರಿಗೆ ಕೃಷಿ ಪರಿಕರಗಳನ್ನು ವಿತರಿಸಿ ಅವರು ಮಾತನಾಡಿದರು.

**ಮುಖ್ಯಾಂಶಗಳು**

- ಗೇರು ಕೃಷಿ ರೈತರ ಪಾಲಿಗೆ ವರದಾನ, ಪ್ರೋತ್ಸಾಹದ ಅಗತ್ಯ
- ಹೊಸ ತಳಿ ಅಳವಡಿಸಿದರೆ ಅಧಿಕ ಇಳುವರಿ ಪಡೆಯಲು ಸಾಧ್ಯ
- ಗೇರು ಮೌಲ್ಯವರ್ಧನೆಗೆ ರೈತರು ವಿಜ್ಞಾನಿಗಳ ಸಲಹೆ ಪಡೆಯಿರಿ

## 'ಲಾಭದಾಯಕ ಕೃಷಿ, ಉದ್ಯಮ'

ಉಪವಿಭಾಗಾಧಿಕಾರಿ ಡಾ. ಯತೀಶ್ ಉಳ್ಳಾಲ್ ಮಾತನಾಡಿ, 'ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಏಷ್ಯದ ವಿವಿಧ ಪ್ರದೇಶ, ಹವಾಗುಣಕ್ಕೆ ಹೊಂದಿಕೊಳ್ಳಬಹುದಾದ ಗೇರು ಜೀನ್ ಬ್ಯಾಂಕ್, ಸೀಡ್ ಬ್ಯಾಂಕ್ ಇದೆ. ಈ ಹಿಂದೆ ಗೇರು ಕಾಡುತ್ಪತ್ತಿಯಂತಿದ್ದರೂ ಪ್ರಸ್ತುತ ಲಾಭದಾಯಕ ಕೃಷಿ ಉದ್ಯಮವಾಗಿ ಬೆಳೆದಿದೆ. ಗೇರು ಸಂಶೋಧನಾ ನಿರ್ದೇಶನಾಲಯದ ವಿವಿಧ ರೈತಪರ ಯೋಜನೆಗಳಿಂದ ಬೆಳೆಗಾರರು ಪ್ರಯೋಜನ ಪಡೆದು ಗೇರುಕೃಷಿಯಲ್ಲಿ ಅಭಿವೃದ್ಧಿ ಪಡೆಯುವಂತಾಗಬೇಕು' ಎಂದರು.



ಪುತ್ತೂರಿನ ಮೊಟ್ಟೆತ್ತಡ್ಕದಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಶುಕ್ರವಾರ ನಡೆದ 'ರಾಷ್ಟ್ರೀಯ ಗೇರು ದಿನಾಚರಣೆ' ಯನ್ನು ಜಿಲ್ಲಾಧಿಕಾರಿ ಜಿಲ್ಲಾಧಿಕಾರಿ ಸಿಂಧೂ ಬಿ. ರೂಪೇಶ್ ಉದ್ಘಾಟಿಸಿದರು

'ತೋಟಗಾರಿಕಾ ಬೆಳೆಗಳಿಗೆ ಪರ್ಯಾಯ ಬೆಳೆಯಾಗಿ ಗೇರು ಕೃಷಿಯನ್ನು ಅಳವಡಿಸಬಹುದು. ಈ ಕೃಷಿಯಲ್ಲಿ ಹೆಚ್ಚಿನ ಖರ್ಚು, ನಿರ್ವಹಣೆಯ ಅಗತ್ಯಬೀಳುವುದಿಲ್ಲ. ಪ್ರಕೃತಿಯಲ್ಲಿ ಸಿಗುವಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಉತ್ತಮ ಇಳುವರಿ ಪಡೆಯಬಹುದು' ಎಂದರು. 'ಪ್ರಸ್ತುತ ಗೇರು ಮೌಲ್ಯವರ್ಧನೆಗೊಂಡು ಹೆಚ್ಚಿನ ಬೇಡಿಕೆ ಪಡೆದಿರುವುದರಿಂದ ಬೆಳೆಗಾರರು ಆಧುನಿಕ ಪದ್ಧತಿಯ ಕೃಷಿ ಹಾಗೂ ಗೇರು ಸಂಶೋಧನಾ ನಿರ್ದೇಶನಾಲಯದ ವಿಜ್ಞಾನಿಗಳ ಸಲಹೆ ಸೂಚನೆ ಪಡೆಯುವುದು ಅಗತ್ಯ' ಎಂದು ತಿಳಿಸಿದರು.

ತಹಶೀಲ್ದಾರ್ ರಮೇಶ್ ಬಾಬು ಇದ್ದರು. ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ನಿರ್ದೇಶಕ ಡಾ. ಎಂ.ಗಂಗಾಧರ್ ನಾಯಕ್ ಸ್ವಾಗತಿಸಿದರು. ಹಿರಿಯ ವಿಜ್ಞಾನಿ ಡಾ. ಈರದಾಸಪ್ಪ ವಂದಿಸಿದರು. ಸಿಬ್ಬಂದಿ ಸಂದೇಶ್ ಹಾಗೂ ಪ್ರೀತಿ ನಿರೂಪಿಸಿದರು.

# ಮೊಟ್ಟೆತ್ತಡ್ಕ ಡಿಸಿಆರ್‌ನಲ್ಲಿ ಗೇರು ದಿನೋತ್ಸವ

- ತಂತ್ರಜ್ಞಾನ ಬಳಕೆಯಿಂದ ಗೇರು ಕೃಷಿಯಲ್ಲಿ ಸ್ವಾವಲಂಭನೆ ಸಾಧ್ಯ -ಸಿಂಧೂ ರೂಪೇಶ್
- ಗೇರು ಬೆಳೆ ನಷ್ಟಕ್ಕೂ ವಿಮೆ ನೀಡುವಂತೆ ಒತ್ತಾಯಿಸುವ ಅಗತ್ಯವಿದೆ- ಡಾ। ಸೆಲ್ವಮಣಿ

ಪುತ್ತೂರು: ಮೊಟ್ಟೆತ್ತಡ್ಕದಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ರೈತರ ಸಹಭಾಗಿತ್ವದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗಳ ಮೂಲಕ ಪರಿಶಿಷ್ಟ ಜಾತಿ ಜನಾಂಗದವರ ಸಬಲೀಕರಣ ಎಂಬ ಧ್ಯೇಯದೊಂದಿಗೆ ಗೇರು ದಿನೋತ್ಸವವನ್ನು ಮಾ.13ರಂದು ಆಚರಿಸಲಾಯಿತು. ಬೆಳಿಗ್ಗೆ ರೈತರಿಗಾಗಿ ಸಂಶೋಧನಾ ನಿರ್ದೇಶನಾಲಯದ ಪ್ರಾಯೋಗಿಕ ಗೇರು ತೋಟಗಳ ವೀಕ್ಷಣೆ ಮತ್ತು ಸಂವಿಧಾನ ದಿನಾಚರಣೆಯ ಸಭಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

**ಅಕ್ರಮ ಸಕ್ರಮಕ್ಕೆ ಪ್ಲಾಟ್ ಮಾಡಿಸಿ ಜಿಲ್ಲೆಯಲ್ಲಿ ಹೊಸದಾಗಿ ಅಕ್ರಮ ಸಕ್ರಮ ಆಗಿರುವ ಕಡೆಗಳಲ್ಲಿ ಪ್ಲಾಟ್ ಆಗಿಲ್ಲ. ಪ್ಲಾಟ್ ಆಗದೆ ಗಡಿಗುರುತು ಮಾಡಲಾಗುವುದಿಲ್ಲ. ಈ ಕುರಿತು ನನ್ಯ ಅಚ್ಚುತ ಮೂಡೆತ್ತಾಯ ಅವರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು ಈ ಕುರಿತು ಜಿಲ್ಲಾಧಿಕಾರಿಗಳು ಪರಿಶೀಲಿಸುವ ಭರವಸೆ ವ್ಯಕ್ತಪಡಿಸಿದರು.**

ಮುಖ್ಯ ಅತಿಥಿಯಾಗಿದ್ದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ। ಆರ್. ಸೆಲ್ವಮಣಿಯವರು ಮಾತನಾಡಿ, ನಾವು ಒಳ್ಳೆಯ ನಾಗರಿಕರಾಗಲು ಸಂವಿಧಾನದ 51 ನೇ ವಿಧಿ ಹೇಳುವಂತೆ ನಮ್ಮ ಕರ್ತವ್ಯಗಳ ಕುರಿತು ಗಮನವಿಟ್ಟು ಅದನ್ನೂ ಪಾಲಿಸುವ ಅಗತ್ಯವಿದೆ ಎಂದು ಹೇಳಿದರು. ದ.ಕ. ಜಿಲ್ಲೆಯಲ್ಲಿ ಭತ್ತ, ಅಡಿಕೆ, ಕಾಳುಮೆಣಸಿನ ಬೆಳೆಗೆ ಮಾತ್ರ ಬೆಳೆ ವಿಮೆ ದೊರೆಯುತ್ತಿದ್ದು ಗೇರು ಬೆಳೆ ನಷ್ಟಕ್ಕೂ ವಿಮೆ ನೀಡುವಂತೆ ರೈತರು ಒತ್ತಾಯಿಸುವ ಅಗತ್ಯವಿದೆ ಎಂದು ಡಾ. ಸೆಲ್ವಮಣಿ ಹೇಳಿದರು ಗೇರು ಕೃಷಿಕರ ಸಹಕಾರ ಸಂಘ ಸ್ಥಾಪಿಸುವುದು, ಸ್ವಸಹಾಯ ಸಂಘಗಳ ಮೂಲಕ ಹಣ್ಣಿನ ಮೌಲ್ಯ ವರ್ಧನೆ ಮಾಡುವುದೇ ರೈತರ ಬಹುತೇಕ ಸಮಸ್ಯೆಗಳಿಗೆ ಪರಿಹಾರ, ರೈತರು ಮುಂದೆ ಬಂದರೆ ಜಿಲ್ಲಾ ಪಂಚಾಯತಿನಿಂದ ಅವಶ್ಯ ಸಹಾಯ ನೀಡಲಾಗುವುದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಪ್ರಭಾರ ನಿರ್ದೇಶಕ ಡಾ। ಎಮ್.ಜಿ. ನಾಯಕ್ ಈ ವರ್ಷ ಹವಾಮಾನ ವೈಪರೀತ್ಯದಿಂದ ಹಾಗೂ ಚಹ ಸೊಳ್ಳೆ ಕಾಟದಿಂದಾಗಿ ಬಹುಸಂಖ್ಯಾತ ಗೇರು ಕೃಷಿಕರು ತೊಂದರೆ ಅನುಭವಿಸುತ್ತಿದ್ದಾರೆ ಎಂದರು. ಈ ವರ್ಷ ಪರಿಶಿಷ್ಟ ಜನಾಂಗದವರ ಸಬಲೀಕರಣಕ್ಕಾಗಿ ಸರಕಾರದ ಯೋಜನೆಯಂತೆ ಸುಮಾರು 90 ಲಕ್ಷ ರೂ. ಮೌಲ್ಯದ ಸವಲತ್ತುಗಳನ್ನು ನೀಡಲಾಗುತ್ತಿದೆ ಅದರ ಸದುಪಯೋಗ ಆಗಬೇಕು ಎಂದು ಆ ಕುರಿತು ವಿವರಣೆಗಳನ್ನು ನೀಡಿದರು. ಡಾ. ವನಿತಾ ವಂದಿಸಿದರು.

**ಗೇರು ದಿನೋತ್ಸವ:** ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ದ.ಕ. ಜಿಲ್ಲಾಧಿಕಾರಿ ಸಿಂಧೂ ಬಿ. ರೂಪೇಶ್‌ರವರು ಮಾತನಾಡಿ, ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಗೇರು ಕೃಷಿಯಲ್ಲಿ ಸ್ವಾವಲಂಭನೆ ಸಾಧ್ಯವಿದ್ದು, ಆಧುನಿಕ ತಂತಜ್ಞಾನಗಳನ್ನು ಬಳಸಿಕೊಂಡು ರೈತನ ಆದಾಯವನ್ನು ದ್ವಿಗುಣಗೊಳಿಸಲು ಗೇರು ಕೃಷಿ ತುಂಬಾ ಸಹಕಾರಿ ಎಂದು ಹೇಳಿದರು.

ಗೇರು ಕೃಷಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದ್ದು, ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ವಿಜ್ಞಾನಿಗಳು ಈಭಾಗದ ಗೇರು ಬೆಳೆಗಾರರಿಗೆ ಹೆಚ್ಚಿನ ಮಾಹಿತಿ, ತರಬೇತಿ ಕಾರ್ಯ ಆಯೋಜಿಸುತ್ತಿರುವುದು ಉತ್ತಮ ಕಾರ್ಯ. ಗೇರು ಕೃಷಿ ರೈತರಿಗೊಂದು ವರದಾನ, ಇತರ ತೋಟಗಾರಿಕಾ ಬೆಳೆಗಳಿಗೆ ಪರ್ಯಾಯ ಬೆಳೆಯಾಗಿ ಗೇರು ಕೃಷಿಯನ್ನು ಅಳವಡಿಸಬಹುದು. ಈ ಕೃಷಿಯಲ್ಲಿ ಹೆಚ್ಚಿನ ಖರ್ಚು, ನಿರ್ವಹಣೆಯ ಅಗತ್ಯವಿಲ್ಲ. ಪ್ರಕೃತಿಯಲ್ಲಿ ಸಿಗುವಂತಹ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಗೇರು ಕೃಷಿಯಲ್ಲಿ ಉತ್ತಮ ಇಳುವರಿ ತೆಗೆಯಬಹುದು ಎಂದರು.



**ರೈತರೊಂದಿಗೆ ಸಂವಾದ:** ನಂತರ ನಡೆದ ಸಂವಾದದಲ್ಲಿ ಭಾಗವಹಿಸಿದ ರೈತರು, ಅಖಿಲ ಭಾರತ ಗೇರು ಬೆಳೆಗಾರರ ಸಂಘದ ಪದಾಧಿಕಾರಿಗಳು ಮಾತನಾಡಿ, ಗೇರು ಬೆಳೆಗೆ ಸಿಗಬೇಕಾದ ನ್ಯಾಯಯುತ ಬೆಲೆ ಸಿಗುತ್ತಿಲ್ಲ, ವಿದೇಶದಿಂದ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ಬೀಜಗಳಿಗೆ ಇಲ್ಲಿನ ರೈತರ ಬೀಜಗಳಿಗಿಂತ ಉತ್ತಮ ಬೆಲೆ ಸಿಗುತ್ತಿದೆ ಎಂದು ಹೇಳಿದರು, ಜಿಲ್ಲಾಡಳಿತವು ಇನ್ನು ಮುಂದೆ ರೈತ ಸಂಘಗಳ ಸಭೆ ಕರೆಯುವಾಗ ಗೇರು ಬೆಳೆಗಾರರ ಸಂಘವನ್ನೂ ಪರಿಗಣಿಸಬೇಕು ಎಂದು ಜಿಲ್ಲಾಧಿಕಾರಿಗಳನ್ನು ಕೇಳಿಕೊಂಡರು.

ಪುತ್ತೂರಿನ ಸಹಾಯಕ ಆಯುಕ್ತ ಡಾ. ಯತೀಶ್ ಉಳ್ಳಾಲ್ ಮಾತನಾಡಿ, ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ವಿಶ್ವಾದ ವಿವಿಧ ಪ್ರದೇಶ, ಹವಾಗುಣಕ್ಕೆ ಹೊಂದಿಕೊಳ್ಳಬಹುದಾದ ಗೇರು ಜೀನ್ ಬ್ಯಾಂಕ್, ಸೀಡ್ ಬ್ಯಾಂಕ್ ಇಲ್ಲಿದೆ. ಈ ಹಿಂದೆ ಗೇರು ಕಾಡುತತ್ತಿಯಂತಿದ್ದರೂ ಪ್ರಸ್ತುತ ಲಾಭದಾಯಕ ಕೃಷಿ ಉದ್ಯಮವಾಗಿ ಬೆಳೆದಿದೆ. ಗೇರು ಸಂಶೋಧನಾ ನಿರ್ದೇಶನಾಲಯದ ವಿವಿಧ ರೈತಪರ ಯೋಜನೆಗಳಿಂದ ಬೆಳೆಗಾರರು ಪ್ರಯೋಜನ ಪಡೆದು ಗೇರುಕೃಷಿಯಲ್ಲಿ ಅಭಿವೃದ್ಧಿ ಪಡೆಯುವಂತಾಗಬೇಕು ಎಂದರು.

ಪರಿಶಿಷ್ಟ ಜನಾಂಗದವರ ಜಾಗಗಳಲ್ಲಿ ನೀರಾವರಿ ವ್ಯವಸ್ಥೆ ಇಲ್ಲದಿರುವಲ್ಲಿ ಸಹಾಯ ಮಾಡುವುದು, ಸೌಲಭ್ಯಗಳನ್ನು ನೀಡುತ್ತಿರುವಲ್ಲಿ ಅವುಗಳನ್ನು ಫಾಲೋಅಪ್ ಮಾಡುವುದು ಮುಂತಾದ ಕಾರ್ಯಗಳು ಆದರೆ ಆ ಜನಾಂಗದವರಿಗೆ ಇನ್ನೂ ಹೆಚ್ಚಿನ ಪ್ರಯೋಜನ ಆಗುವುದು ಎಂದು ಬೆಳ್ತಂಗಡಿಯ ತುಂಬುತ್ತಡ್ಕದ ರಾಜರಾಮ್ ತಿಳಿಸಿದರು. ಗೇರು ಬೆಳೆ ನಿರ್ವಹಣೆ, ಅಂತರ ಬೆಳೆ, ಗೇರು ಹಣ್ಣಿನ ಸಂಸ್ಕರಣೆಗೆ ಸಂಬಂಧಿಸಿದಂತಹ ನಾಲ್ಕು ಲಘು ಪುಸ್ತಿಕೆಗಳನ್ನು ಬಿಡುಗಡೆ ಮಾಡಲಾಯಿತು. ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ನಿರ್ದೇಶಕ ಹಾಗೂ ಹಿರಿಯ ವಿಜ್ಞಾನಿ ಡಾ. ಎಂ.ಜಿ. ನಾಯಕ್ ಸ್ವಾಗತಿಸಿದರು. ಹಿರಿಯ ವಿಜ್ಞಾನಿ ಡಾ. ಈರದಾಸಪ್ಪ ವಂದಿಸಿದರು. ಸಿಬ್ಬಂದಿಗಳಾದ ಸಂದೇಶ್ ಹಾಗೂ ಪ್ರೀತಿ ಕಾರ್ಯಕ್ರಮ ನಿರೂಪಿಸಿದರು.

THE HI

ಸ್ಪಷ್ಟ ಬಿಡುಗಡೆ

# 'Adopt modern practices for good income'

SPECIAL CORRESPONDENT
MANGALURU

Deputy Commissioner Sindhu B. Rupesh on Friday asked cashew growers to earn good income by following modern cultivation practices.

She was speaking at the Cashew Day celebrations organised by the Directorate of Cashew Research in Puttur.

The Deputy Commissioner distributed agricultural implements to select farmers from Scheduled Castes on the occasion. She said that the initiative will help improve the livelihood of farmers from the community.

The directorate also observed the Constitution Day on Friday.

Speaking on the occasion, Dakshina Kannada Zilla Panchayat Chief Executive Officer R. Selvamani focussed on Article 3 of the Constitution which emphasised on the duties of citizens. One should respect the national flag, the national anthem and freedom fighters. Equality in all walks of life should be maintained and environment should be protected, he said.

Mr. Selvamani gave detailed information on the benefits given from the government to farmers, on crop insurance and cashew processing at the gram panchayat level. Crop insurance is only available for paddy, arecanut and pepper in the district.

He said that establishing cashew farmers co-operative society and the enhancement of the value of cashew apple through self-help groups would help solve most of the problems of the farmers.

In all, four publications related to cashew crop management, inter-cropping and fruit processing were released.

The theme of the Cashew Day was "Empowerment of Scheduled Castes community through SCSP programmes". The directorate also organised a visit for farmers to its plantation.

Acting Director of the directorate M.G. Nayak spoke.



Participants on a field visit organised by the Directorate of Cashew Research at Puttur as part of Cashew Day.
▪SPECIAL ARRANGEMENT

# ‘ಗೇರು ಕೃಷಿಯಲ್ಲಿ ತಂತ್ರಜ್ಞಾನ ಬಳಸಿ ಸ್ವಾವಲಂಬಿಗಳಾಗಿ’

**ಪುತ್ತೂರು** ಮಾ. 13: ಗೇರು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಕೆಯೊಂದಿಗೆ ಆದಾಯ ಗಳಿಸುವ ಕಡೆಗೆ ಬೆಳೆಗಾರರು ಗಮನ ಹರಿಸಬೇಕು ಎಂದು ಜಿಲ್ಲಾಧಿಕಾರಿ ಸಿಂಧೂ ಬಿ. ರೂಪೇಶ್ ಹೇಳಿದರು.

ಪುತ್ತೂರಿನ ಮೊಟ್ಟೆತ್ತಡ್ಕದಲ್ಲಿರುವ ಗೇರು ಸಂಶೋಧನ ನಿರ್ದೇಶನಾಲಯದಲ್ಲಿ ರಾಷ್ಟ್ರೀಯ ಗೇರು ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.


ಪುತ್ತೂರು ಗೇರು ಸಂಶೋಧನ ನಿರ್ದೇಶನಾಲದ ವಿಜ್ಞಾನಿಗಳು ಈಭಾಗದ ಗೇರು ಬೆಳೆಗಾರರಿಗೆ ಮಾಹಿತಿ, ತರಬೇತಿ ಆಯೋಜಿಸುತ್ತಿರುವುದು ಉತ್ತಮ ಕಾರ್ಯ. ಇತರ ತೋಟಗಾರಿಕಾ ಬೆಳೆಗಳಿಗೆ ಪರ್ಯಾಯ ಬೆಳೆಯಾಗಿ ಗೇರು ಕೃಷಿಯನ್ನು ಅಳವಡಿಸಬಹುದು. ಈ ಕೃಷಿಯಲ್ಲಿ ಹೆಚ್ಚಿನ ಖರ್ಚು, ನಿರ್ವಹಣೆಯ ಅಗತ್ಯವಿಲ್ಲ, ಪ್ರಕೃತಿಯಲ್ಲಿ ಸಿಗುವಂತಹ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಗೇರು ಕೃಷಿಯಲ್ಲಿ ಉತ್ತಮ ಇಳುವರಿ ತೆಗೆಯಬಹುದು ಎಂದರು.

### ಪರಿಕರ ವಿತರಣೆ

**ಪರಿಶಿಷ್ಟ ಜಾತಿ ಅಭಿವೃದ್ಧಿ ಯೋಜನೆಯಡಿ ವಿವಿಧ ಗೇರು ಬೆಳೆಗಾರರಿಗೆ ಕೃಷಿ ಪರಿಕರಗಳನ್ನು ಸಿಂಧೂ ಬಿ. ರೂಪೇಶ್ ವಿತರಿಸಿದರು.**

**ಬೇಡಿಕೆ ಹೆಚ್ಚಿದೆ**

ಆಧುನಿಕತೆಯ ಬದಲಾವಣೆಯೊಂದಿಗೆ ಗೇರು ಕೃಷಿಯಲ್ಲಿ ಹೊಸ ಹೊಸ ತಳಿಗಳನ್ನು ಅಳವಡಿಸಿಕೊಂಡಾಗ ಅಧಿಕ ಇಳುವರಿ ಪಡೆಯಲು ಸಾಧ್ಯ. ಪ್ರಸ್ತುತ ಗೇರು ಮೌಲ್ಯ ವರ್ಧನೆಗೊಂಡು ಬೇಡಿಕೆ ಪಡೆದು ಕೊಂಡಿ ದ್ದರಿಂದ ಬೆಳೆಗಾರರು ಆಧುನಿಕ ಪದ್ಧತಿಯ ಕೃಷಿ, ಗೇರು ಸಂಶೋಧನ ನಿರ್ದೇಶನಾಲಯದ ವಿಜ್ಞಾನಿಗಳ ಸಲಹೆ ಪಡೆಯುವುದು ಅಗತ್ಯ ಎಂದರು. ➋2



ಪುತ್ತೂರಿನ ಮೊಟ್ಟೆತ್ತಡ್ಕದಲ್ಲಿ ಡಿಸಿ ಸಿಂಧೂ ಬಿ. ರೂಪೇಶ್ ಕಾರ್ಯಕ್ರಮ ಉದ್ಘಾಟಿಸಿದರು.

## ‘ತಂತ್ರಜ್ಞಾನ ಬಳಸಿ ಸ್ವಾವಲಂಬಿಗಳಾಗಿ’

(ಒಂದನೇ ಪುಟದಿಂದ)

**ಗೇರು ಉದ್ಯಮವಾಗಿದೆ**

ಪುತ್ತೂರಿನ ಸಹಾಯಕ ಕಮಿಷನರ್ ಡಾ। ಯತೀಶ್ ಉಳ್ಳಾಲ್ ಮಾತನಾಡಿ, ಪುತ್ತೂರು ಗೇರು ಸಂಶೋಧನ ನಿರ್ದೇಶನಾಲಯದಲ್ಲಿ ವಿಶ್ವಾದ ವಿವಿಧ ಪ್ರದೇಶ, ಹವಾಗುಣಕ್ಕೆ ಹೊಂದಿಕೊಳ್ಳಬಹುದಾದ ಗೇರು ಜೀನ್ ಬ್ಯಾಂಕ್, ಸೀಡ್ ಬ್ಯಾಂಕ್ ಇದೆ ಎಂದು ಹೇಳಿದರು.

**ಉದ್ಯಮವಾಗಿ ಬೆಳೆದಿದೆ.**

ಈ ಹಿಂದೆ ಗೇರು ಕಾಡುತ್ಪತ್ತಿಯಂತಿದ್ದರೂ ಪ್ರಸ್ತುತ ಲಾಭದಾಯಕ ಕೃಷಿ ಉದ್ಯಮವಾಗಿ ಬೆಳೆದಿದೆ. ಗೇರು ಸಂಶೋಧನ ನಿರ್ದೇಶನಾಲಯದ ವಿವಿಧ ರೈತಪರ ಯೋಜನೆಗಳಿಂದ ಬೆಳೆಗಾರರು ಪ್ರಯೋಜನ ಪಡೆದು ಗೇರು ಕೃಷಿಯಲ್ಲಿ ಅಭಿವೃದ್ಧಿ ಪಡೆಯುವಂತಾಗಬೇಕು ಎಂದು ಅಭಿಪ್ರಾಯ ಪಟ್ಟರು.

ಪುತ್ತೂರು ತಹಶೀಲ್ದಾರ್ ರಮೇಶ್ ಬಾಬು, ಪುತ್ತೂರು ಗೇರು ಸಂಶೋಧನ ನಿರ್ದೇಶನಾಲಯದ ಹಿರಿಯ ವಿಜ್ಞಾನಿ ಡಾ। ಈರದಾಸಪ್ಪ ಮೊದಲಾದವರು ಉಪಸ್ಥಿತರಿದ್ದರು. ಪುತ್ತೂರು ಗೇರು ಸಂಶೋಧನ ನಿರ್ದೇಶನಾಲಯದ ನಿರ್ದೇಶಕ ಹಾಗೂ ಹಿರಿಯ ವಿಜ್ಞಾನಿ ಡಾ। ಎಂ.ಜಿ. ನಾಯಕ್ ಸ್ವಾಗತಿಸಿ, ಸಿಬಂಧಿ ಸಂದೇಶ್ ಹಾಗೂ ಪ್ರೀತಿ ಕಾರ್ಯಕ್ರಮ ನಿರ್ವಹಿಸಿದರು.

ಉದಯವಾಣಿ ದಿ|14/3/20